# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.

ಸಿಸಿಃ714 /2016

| | | |
|---|---|---|
| ಹೆಸರು | ದಾಸೇಗೌಡ | ದಿಃ 28-10-2017 |
| ತಂದೆ ಹೆಸರು | ಸಣ್ಣೇಗೌಡ | |
| ವಯಸ್ಸು | 67 ವರ್ಷ | ಪಿಡಬ್ಲ್ಯೂಃ 1 |
| ಉದ್ಯೋಗ | ನಿವೃತ್ತ ಮುಖ್ಯ ಉಪಾಧ್ಯಾಯರು | ಸಿಡಬ್ಲ್ಯೂಃ 1 |
| ವಾಸ | ತಿರುಮನಹಳ್ಳಿ ಗ್ರಾಮ | ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು |

## ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ

ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಗೈರುಹಾಜರಾಗಿರುವ ಆರೋಪಿಗಳು ಗೊತ್ತು. ದಿಃ23-10-2015 ರಂದು ಮಧ್ಯಾಹ್ನ 4 ಗಂಟೆ ಸಮಯದಲ್ಲಿ ನಮಗೆ ಸೇರಿದ ತೆಂಗು ಮತ್ತು ಅಡಕೆ ತೋಟದಲ್ಲಿ ತೆಂಗಿನ ಕಾಯಿ ಕೀಳಿ ಗುಡ್ಡೆ ಹಾಕಿದ್ದೆವು. ಆ ಸಮಯದಲ್ಲಿ ನಮ್ಮ ಪಕ್ಕದ ಜಮೀನಿನ ಹುಡುಗ ಚಾಸಾ-2 ಸಣ್ಣ ನಮ್ಮ ತೋಟದಲ್ಲಿ ತೆಂಗಿನ ಕಾಯಿಯನ್ನು 1 ಮತ್ತು 2ನೇ ಆರೋಪಿತರು ಎರಡು ಗೋಣಿ ಚೀಲದಲ್ಲಿ ಕಳ್ಳತನದಿಂದ ತೆಂಗಿನ ಕಾಯಿಗಳನ್ನು ತುಂಬಿಕೊಂಡು ಬೈಕಿನ ಮೇಲೆ ಹೋಗುತ್ತಿದ್ದಾರೆ ಎಂದು ಹೇಳಿದ. ಆ ಸಮಯದಲ್ಲಿ ನಾನು ಮತ್ತು ನನ್ನ ಮಗ ಚಾಸಾ-3, ಚಾಸಾ-4 ಚಾಸಾ-5 ರವರು ಆರೋಪಿ 1 ಮತ್ತು 2 ರವರನ್ನು ಹಿಂಬಾಲಿಸಿ ಹೋಗಿ ತೆಂಗಿನ ಕಾಯಿ ಮತ್ತು ಸದರಿ ಆರೋಪಿಗಳನ್ನು ಊರಿಗೆ ಹಿಡಿದುಕೊಂಡು ಬಂದೆವು. ನಿವೃತ್ತ ಶಿಕ್ಷಕರಾದ ಗಣೇಶ್ ರವರು ಇಂದು ಹಬ್ಬ ಇದೆ ಬಿಡಿ ಪಂಚಾಯ್ತಿ ಮಾಡೋಣ ಎಂದು ಹೇಳಿದರು. ನಂತರ ನಾವು 1 ಮತ್ತು 2ನೇ ಆರೋಪಿಗಳನ್ನು ಬೈಕ್ ಸಮೇತ ಬಿಟ್ಟಿರುತ್ತೇವೆ. 1 ಮತ್ತು 2 ನೇ ಆರೋಪಿತರು ಪಂಚಾಯ್ತಿಗೆ ಬರಲಿಲ್ಲ, 3 ಮತ್ತು 4ನೇ ಆರೋಪಿತರು 1 ಮತ್ತು 2 ನೇ ಆರೋಪಿತರ ವಿರುದ್ಧ ದೂರು ಕೊಟ್ಟರೆ ಚಾಸಾ-4 ಮತ್ತು 5 ರವರನ್ನು ಕೊಲೆ ಮಾಡುವುದಾಗಿ ಹಾಗೂ ಅಟ್ರಾಸಿಟಿ ಕೇಸನ್ನು ಹಾಕುವುದಾಗಿ ಬೆದರಿಸಿರುತ್ತಾರೆ. ನಂತರ ನಾವು ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇವೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು

ಗುರ್ತಿಸಲಾಯಿತು. ದೂರು ಕೊಟ್ಟ ಮಾರನೆಯ ದಿನ ಪೋಲೀಸರು ಜಮೀನಿನ ಬಳಿ ಬಂದು ಸ್ಥಳ ಮಹಜರ್ ಮಾಡಿದರು. ಸ್ಥಳವನ್ನು ನಾನೇ ಪೋಲೀಸರಿಗೆ ತೋರಿಸಿರುತ್ತೇನೆ. ಪೋಲೀಸರು ಮಾಡಿದ ಮಹಜರ್‌ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಲಾಯಿತು. 4-5 ತಿಂಗಳ ನಂತರ ಪೋಲೀಸ್ ಠಾಣೆಗೆ ಹೋಗಿ ಅಮಾನತ್ತುಪಡಿಸಿಕೊಂಡಿದ್ದ ತಿಂಗಿನ ಕಾಯಿಗಳನ್ನು ವಾಪಸ್ಸು ಪಡೆದುಕೊಂಡು ಬಂದೆವು. ಆ ಸಮಯದಲ್ಲಿ ಪೋಲೀಸರು ಮಹಜರ್ ಮಾಡಿದರು. ಸದರಿ ಮಹಜರ್ ಸಮಯದಲ್ಲಿ ಪೋಲೀಸರು 5 ತೆಂಗಿನ ಕಾಯಿಗಳನ್ನು ಶಾಂಪಲ್‌ಗಾಗಿ ತೆಗೆದುಕೊಂಡು ಉಳಿದ ತೆಂಗಿನಕಾಯಿಗಳನ್ನು ನಮಗೆ ಹಿಂದಿರುಗಿಸಿದರು. ಸದರಿ ಮಹಜರ್‌ಗೆ ನಾನು ಸಹಿ ಮಾಡಿದ್ದೇನೆ. ಸದರಿ ಮಹಜರನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3ಎ ಎಂದು ಗುರ್ತಿಸಲಾಯಿತು. 1 ಮತ್ತು 2ನೇ ಆರೋಪಿಗಳು ಗೋಣಿಚೀಲಕ್ಕೆ ತುಂಬಿದ್ದ ತೆಂಗಿನಕಾಯಿಗಳನ್ನು ಸಾಕ್ಷಿ ಈಗ ಎರಡು ಪೋಟೋದಲ್ಲಿ ನೋಡಿ ಗುರ್ತಿಸಿದ್ದು ನಿಪಿ-4 ಮತ್ತು 5 ಎಂದು ಗುರ್ತಿಸಲಾಯಿತು. ಆದಿನ ಶಾಂಪಲ್‌ಗಾಗಿ ತೆಗೆದ ಐದು ತೆಂಗಿನಕಾಯಿಗಳು ಈಗ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಿಗೆ ಮುಮಾ-1 ಎಂದು ಗುರ್ತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ/ಗಳ ಪರವಾಗಿ ಶ್ರೀ ಬಿಎಸ್‌ಜಿ ವಕೀಲರಿಂದಃ</u>

ಚಾಸಾ-3 ನನ್ನ ಮಗ. ಚಾಸಾ-4 ನನ್ನ ತಮ್ಮನ ಮಗ. ಚಾಸಾ-5 ನನ್ನ ಅಣ್ಣನ ಮಗ. ಚಾಸಾ-7 ನನ್ನ ಚಿಕ್ಕಪ್ಪನ ಮಗ. ಚಾಸಾ-8 ನನ್ನ ತಂಗಿ ಮಗ. ಚಾಸಾ-2 ನಮ್ಮ ಊರಿನವನು. ನಮ್ಮ ಮಧ್ಯೆ ಹಣಕಾಸಿನ ವ್ಯವಹಾರ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-9 ಮತ್ತು ಆರೋಪಿಗಳ ನಡುವೆ ಶೌಚಾಲಯ ಕಟ್ಟುವ ವಿಚಾರದಲ್ಲಿ ಗಲಾಟೆಯಾಗಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲೆ ಮಾಡಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಹಾಸನದ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. 1ನೇ ಆರೋಪಿ ನಮ್ಮ ಮನೆಯಲ್ಲಿ ಯಾವುದೇ ಕೂಲಿ ಕೆಲಸ ಮಾಡಿಲ್ಲ. 1 ಮತ್ತು 2ನೇ ಆರೋಪಿಗಳು ನಮ್ಮ

ತೋಟದಲ್ಲಿ ತೆಂಗಿನ ಕಾಯಿ ಕಳ್ಳತನ ಮಾಡಿರುವ ಬಗ್ಗೆ ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಅದನ್ನು ಬೆರಳಚ್ಚು ಮಾಡಿಸಿ ಕೊಟ್ಟಿರುತ್ತೇನೆ. ನನ್ನ ತೋಟದ ಸರ್ವೆ ನಂಬರ್ ನೆನಪಿಲ್ಲ. ನಾನು ದೂರು ಕೊಡುವಾಗ ಸರ್ವೆ ನಂಬರನ್ನು ದೂರಿನಲ್ಲಿ ಹೇಳಿರುತ್ತೇನೆ. 1 ಮತ್ತು 2ನೇ ಆರೋಪಿಗಳನ್ನು ಬುಕ್ಕಳನ ಕೆರೆ ಬಳಿಯಿಂದ ನಾವು ನಾಲ್ಕು ಬೈಕಿನಲ್ಲಿ ಹೋಗಿ ಕರೆದುಕೊಂಡು ಬಂದೆವು. ನಾಲ್ಕು ಬೈಕುಗಳಲ್ಲಿ ನಾನು, ಚಿದಂಬರ, ನನ್ನ ಅಣ್ಣನ ಮಗ ಮತ್ತು ನನ್ನ ತಮ್ಮನ ಮಗ ಹೋಗಿರುತ್ತೇವೆ. ಆರೋಪಿಗಳು ಕದ್ದ ತೆಂಗಿನಕಾಯಿಯ ಮರಗಳು ತೋಟದ ಪಶ್ಚಿಮ ದಿಕ್ಕಿನಲ್ಲಿದ್ದವು. ಆರೋಪಿಗಳನ್ನು ಹಿಡಿದುಕೊಂಡು ಬಂದಿದ್ದೇವೆ ಎಂದು ನಮ್ಮ ದೂರಿನಲ್ಲಿ ಹೇಳಿರುತ್ತೇವೆ. ನಮ್ಮ ಹೆಸರಿನಲ್ಲಿ ತೆಂಗಿನ ತೋಟ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಆರೋಪಿಗಳು ಆ ದಿನ ಉಪಯೋಗಿಸಿದ ಬೈಕಿನ ನಂಬರನ್ನು ನನ್ನ ದೂರಿನಲ್ಲಿ ಬರೆಸಿಲ್ಲ. ಬೈಕಿನಲ್ಲಿ ಸವಾರ ಮತ್ತು ಹಿಂಬದಿ ಸವಾರನಿಗೆ ಮಾತ್ರ ಕೂರಲು ಅವಕಾಶ ಇದೆ ಎಂದರೆ ಸರಿಯಲ್ಲ. ಸಿಪ್ಪೆ ತೆಗೆಯದ ತೆಂಗಿನಕಾಯಿಗಳನ್ನು ಒಂದು ಚೀಲಕ್ಕೆ 15 ರಿಂದ 20 ಕಾಯಿಯನ್ನು ತುಂಬಬಹುದಷ್ಟೆ. ಒಂದು ಚೀಲಕ್ಕೆ 18 ಕಾಯಿಗಿಂತ ಹೆಚ್ಚಿಗೆ ತುಂಬಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಎರಡು ಚೀಲಗಳನ್ನು ಬೈಕಿನಲ್ಲಿ ಇಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಬೈಕಿನಲ್ಲಿ ಚೀಲಗಳನ್ನು ಇಡಲು ಸ್ಥಳವಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ವಿರುದ್ಧ ದೂರು ದಾಖಲಿಸಿದ ಕಾರಣ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಕಳ್ಳತನ ಮಾಡದಿದ್ದರೂ ಸಹ ನಾವು ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇವೆಂದರೆ ಸರಿಯಲ್ಲ. ಪೋಲೀಸರು ಮಹಜರ್ ಮಾಡುವ ವಿಷಯವನ್ನು ನಮಗೆ ಫೋನ್ ಮೂಲಕ ತಿಳಿಸಿದ್ದರು. ಮಹಜರ್ ಮಾಡುವ ಸಮಯದಲ್ಲಿ ಸುಮಾರು ನಾಲ್ಕು ಜನ ಸೇರಿದ್ದರು. ಮಹಜರನ್ನು ಎಷ್ಟು ಗಂಟೆಗಳ ಕಾಲ ಮಾಡಿದರು ಎಂದು ನನಗೆ ಗೊತ್ತಿಲ್ಲ. ಮಹಜರ್‌ನಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ತೋಟದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲ ತೋಟಗಳಲ್ಲಿ ಮುಮಾ-1 ರಂತಹ ತೆಂಗಿನಕಾಯಿಗಳು ಸಿಗುತ್ತವೆ ಎಂದರೆ ಸರಿ. ಮುಮಾ-1 ರ ತೆಂಗಿನಕಾಯಿಗಳು ನಮ್ಮ

**ತೋಟದ ತೆಂಗಿನಕಾಯಿಗಳು ಅಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡುವ ಸಮಯದಲ್ಲಿ ನಮ್ಮಿಂದ ಸಹಿ ಪಡೆದಿರುವ ಯಾವುದೇ ತೆಂಗಿನ ಕಾಯಿ ಇಲ್ಲ. ನಮಗೆ ಯಾವುದೇ ತೆಂಗಿನ ತೋಟವಾಗಲಿ, ಅಡಿಕೆ ತೋಟವಾಗಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಎರಡು ಚೀಲದಲ್ಲಿ ತೆಂಗಿನಕಾಯಿಗಳನ್ನು ತುಂಬಿಕೊಂಡು ಬೈಕಿನಲ್ಲಿ ತೆಗೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಬೈಕ್ ಚಲಾಯಿಸಲು ಬರುವುದಿಲ್ಲ ಮತ್ತು ಆತನಿಗೆ ಯಾವುದೇ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. 3 ಮತ್ತು 4ನೇ ಆರೋಪಿಗಳು ನಮ್ಮ ವಿರುದ್ಧ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನಮ್ಮ ತೋಟದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-4 ಮತ್ತು 5 ರಲ್ಲಿ ಇರುವ ತೆಂಗಿನಕಾಯಿಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.**

**ಮರು ವಿಚಾರಣೆಃಇಲ್ಲ** **ಓ ಹೇ ಕೇ ಸ ಇ ಒ**

**ಜೆಎಂಎಫ್‌ಸಿ-ಬೇಲೂರು**